1104 (1507) ಶ್ರೀ ಬಸವರಾಜು ಎ. ಎಸ್. (ಅರಸೀಕೆರೆ) :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಂಗಳೂರಿನ ಮಿಂಟೋ ಕಣ್ಣಾಸ್ಪತ್ರೆಯ ಆರೋಗ್ಯ ಅಧೀಕ್ಷಕರ ಮೇಲೆ ಬೆಂಗಳೂರು ವಿಭಾಗದ ಮುಖ್ಯ ಜಾಗೃತಾಧಿಕಾರಿಗಳಿಗೆ ಅವ್ಯವಹಾರ–ಅಕ್ರಮ ಹಗರಣಗಳ ಕುರಿತು ದೂರು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಜರೂರು ಅಗತ್ಯ ಕ್ರಮಗಳೇನು (ಅಂತಹ ಅಧೀಕ್ಷಕರ ಹೆಸರು ವಿವರ ಒದಗಿಸುವುದು) ;

ಇ) ಭ್ರಷ್ಟಾಚಾರ ದೂರಿನ ಸಂಬಂಧದ ಈ ಪ್ರಕರಣದಲ್ಲಿ ಇಲಾಖೆಯು ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

ಈ) ಈ ದೂರುಗಳಲ್ಲದೇ ಸದರಿ ಅಧಿಕಾರಿ ವೈದ್ಯರ ಮೇಲೆ ಇತರೆ ಹಗರಣದ ಆಡಳಿತ ದುರುಪಯೋಗದ ದೂರುಗಳು ಎಲ್ಲೆಲ್ಲಿ ದಾಖಲಾಗಿವೆ ; ದೂರು ನೀಡಿದವರು ಯಾರು ; ಅವು ಯಾವುವು ;

ಉ) ಹಾಗಿದ್ದಲ್ಲಿ, ಇವುಗಳ ಮೇಲೆ ಕೈಗೊಂಡ ಕ್ರಮಗಳೇನು ?

ಡಾ॥ ವಿ.ಎಸ್. ಆಚಾರ್ಯ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು.

ಆ) ಮತ್ತು ಇ) ವಿಷಯವು ಪರಿಶೀಲನೆಯಲ್ಲಿದೆ. ವರದಿಯು ಲಭ್ಯವಾದನಂತರ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಈ) ಬೇರೆ ಇನ್ಯಾವುದೇ ಇಂತಹ ದೂರುಗಳು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಉ) ಅನ್ವಯಿಸುವುದಿಲ್ಲ.

1105 (1270) ಶ್ರೀಮತಿ ಭಾಗೀರಥಿ ಟಿ. (ಕೊಟ್ಟೂರು) :– ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಕಾರ್ಮಿಕರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು) ;

ಆ) 2007–2008ನೇ ಸಾಲಿನಲ್ಲಿ ಈ ಕಾರ್ಮಿಕರಿಗಾಗಿ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ;

ಇ) ಹಾಗಿದ್ದಲ್ಲಿ, ಈ ಯೋಜನೆಗಳಿಗಾಗಿ ಸರ್ಕಾರ ಖರ್ಚು ಮಾಡಿದ ಹಣ ಎಷ್ಟು?

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):–

ಅ) ಕಾರ್ಮಿಕರ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

1. ಬಳ್ಳಾರಿ ತಾಲ್ಲೂಕು	–	13,132
2. ಸಂಡೂರು	–	7,918
3. ಹಗರಿಬೊಮ್ಮನಹಳ್ಳಿ	–	4,380
4. ಹೂವಿನಹಡಗಲಿ	–	3,475
5. ಕೂಡ್ಲಗಿ	–	4,200
6. ಶಿರಗುಪ್ಪ	–	6,663
7. ಹೊಸಪೇಟೆ	–	13,280
ಒಟ್ಟು	–	53,048

ಆ) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ:

1. ಕಟ್ಟಡ ಕಾರ್ಮಿಕರು ಮರಣ ಹೊಂದಿದರೆ ಅವರ ಅಂತ್ಯ ಕ್ರಿಯೆಗಾಗಿ ರೂ. 2,000/– ಸಹಾಯ ಧನ.

2. ಒಳರೋಗಿಯಾಗಿ ಚಿಕಿತ್ಸೆ ಪಡಯುತ್ತಿದ್ದರೆ, ಮೊದಲು 5 ದಿನಗಳಿಗೆ ರೂ. 400/– ರಂತೆ ಹಾಗೂ ಉಳಿದ ದಿನಗಳಿಗೆ ರೂ. 50/–ರಂತೆ ಗರಿಷ್ಠ ರೂ. 2,000/– ವೈದ್ಯಕೀಯ ಚಿಕಿತ್ಸೆಗೆ ಸಹಾಯಧನ.

3. ಕೆಲಸ ಮಾಡುತ್ತಿದ್ದಾಗ ಅಪಘಾತವಾಗಿ ಮರಣ ಹೊಂದಿದರೆ ಅಥವಾ ಶಾಶ್ವತ ಅಂಗವಿಕಲವಾದರೆ ರೂ. 1,00,000/–ಗಳ ಪರಿಹಾರ ಧನ.

4. ಹೃದ್ರೋಗ, ಕಿಡ್ನಿ ಜೋಡಣೆ ಮತ್ತು ಕ್ಯಾನ್ಸರ್ ಶಸ್ತ್ರಚಿಕಿತ್ಸೆಗಾಗಿ ಗರಿಷ್ಠ ರೂ. 10,000/– ಗಳ ಸಹಾಯಧನ.

ನೋಂದಾಯಿತರಾಗಿ ಒಂದು ವರ್ಷ ಆಗಿರುವವರಿಗೆ :

5. ಮಹಿಳಾ ಕಟ್ಟಡ ಕಾರ್ಮಿಕರಿಗೆ ಹೆರಿಗೆ ಸೌಲಭ್ಯ ರೂ. 4000/– (ಎರಡು ಬಾರಿ ಮಾತ್ರ).

6. ಈ ಕೆಳಗಿನಂತೆ ಕಟ್ಟಡ ಕಾರ್ಮಿಕರ ಅವಲಂಭಿತ 2 ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಹಾಯಧನ.

ಎಸ್.ಎಸ್.ಎಲ್.ಸಿ.	–	ರೂ. 700/–
ಪಿಯುಸಿ	–	ರೂ. 1000/–
ಐಟಿಐ/ಡಿಪ್ಲೊಮಾ	–	ರೂ. 2000/–
ಪದವಿ	–	ರೂ. 1500/–
ಸ್ನಾತಕೋತ್ತರ	–	ರೂ. 5000/–

7. ಕಟ್ಟಡ ಕಾರ್ಮಿಕರ (ಮೊದಲ ಮದುವೆಗೆ) ಹಾಗೂ ಅವಲಂಬಿತ 2 ಮಕ್ಕಳ ಮದುವೆಗೆ ರೂ. 5000/–ಗಳ ಸಹಾಯಧನ.

ನೋಂದಾಯಿತರಾಗಿ ಎರಡು ವರ್ಷ ಆಗಿರುವವರಿಗೆ :

8. ನಿರ್ಮಾಣ ಕೆಲಸದ ಉಪಕರಣ ಖರೀದಿಸಲು ರೂ. 5000/–ಗಳ ಸಾಲ.

ನೋಂದಾಯಿತರಾಗಿ ಐದು ವರ್ಷ ಆಗಿರುವವರಿಗೆ :

9. 50 ವರ್ಷ ಆದ ಮಹಿಳಾ ಕಾರ್ಮಿಕರಿಗೆ ಹಾಗೂ 55 ವರ್ಷ ಆದ ಪುರುಷ ಕಾರ್ಮಿಕರಿಗೆ ತಿಂಗಳಿಗೆ ರೂ. 300/–ರಂತೆ ಪಿಂಚಣಿ ಹಾಗೂ 5 ವರ್ಷಗಳಿಗಿಂತ ಹೆಚ್ಚಿನ ಸೇವೆಗೆ ಪ್ರತಿ ವರ್ಷ ಹೆಚ್ಚುವರಿಯಾಗಿ ರೂ. 10/–ರ ಪಿಂಚಣಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.

10. ಕುಷ್ಠರೋಗ, ಕ್ಯಾನ್ಸರ್, ಪಾರ್ಶ್ವ ವಾಯು ಇತ್ಯಾದಿ ಖಾಯಿಲೆಗಳಿಂದ ಶಾಶ್ವತ ಅಂಗವಿಕಲತೆ ಹೊಂದಿದರೆ, ಪ್ರತಿ ತಿಂಗಳು ರೂ. 300/– ಅಂಗವಿಕಲತೆ ಪಿಂಚಣಿ ಹಾಗೂ ಅಂಗವಿಕಲತೆಯ ಪ್ರಮಾಣವನ್ನು ಆಧರಿಸಿ ರೂ. 5000/–ಗಳ ಸಹಾಯಧನ.

11. ಮನೆ ಕಟ್ಟಲು ರೂ. 50,000/– ಸಾಲ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ :

1. ಕಾರ್ಮಿಕರಿಗೆ ವೈದ್ಯಕೀಯ ನೆರವು ಯೋಜನೆ ರೂ. 10,000/–.

2. ಅಂಗವಿಕಲ ಕಾರ್ಮಿಕರಿಗೆ ಮೂರು ಚಕ್ರದ ಸೈಕಲ್ ಒದಗಿಸುವ ಯೋಜನೆ.

3. ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ ಯೋಜನೆ ರೂ. 2,000/–.

4. ಅಪಘಾತಕ್ಕೀಡಾದ ಕಾರ್ಮಿಕರಿಗೆ ಧನ ಸಹಾಯ ಯೋಜನೆ ರೂ. 3,000/ ಗಳವರೆಗೆ.

5. ಸರ್ಕಾರಿ ಐ.ಟಿ.ಐ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಾರ್ಮಿಕರ ಮಕ್ಕಳಿಗೆ ವಾರ್ಷಿಕ ಶಿಕ್ಷಣ ಶುಲ್ಕದ ಧನ ಸಹಾಯ ನೀಡುವ ಯೋಜನೆ. ರೂ. 1,500/– ಹಾಗೂ ರೂ. 2,000/–ಗಳಂತೆ.

6. ದೃಷ್ಟಿ ದೋಷವುಳ್ಳ ಕಾರ್ಮಿಕರಿಗೆ ಕಣ್ಣಿನ ಶುಶ್ರೂಷಣೆ ಕ್ಯಾಂಪುಗಳನ್ನು ನಡೆಸುವ ನೋಂದಾಯಿತ ಸರ್ಕಾರೇತರ ಸಂಸ್ಥೆಗಳಿಗೆ ಧನ ಸಹಾಯ ನೀಡುವ ಯೋಜನೆ– 5,000/–ಗಳವರೆಗೆ.

7. ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ನೀಡುವ ಯೋಜನೆ.

8. ಅಂಗವಿಕಲ ಕಾರ್ಮಿಕರಿಗೆ ಕೃತಕ ಅಂಗ ಸಾಧನ ಖರೀದಿಸಲು ಧನ ಸಹಾಯ ನೀಡುವ ಯೋಜನೆ.

9. ವಿದ್ಯಾರ್ಥಿ ವೇತನ ಯೋಜನೆ 2007–08 ರಿಂದ ಜಾರಿಗೆ ತರಲಾಗುತ್ತಿದೆ.

ಇ) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಯೋಜನೆಗಳಿಗೆ ಸಂಬಂಧಪಟ್ಟಂತೆ ಇಲ್ಲಿಯವರೆಗೆ ಹಣ ವೆಚ್ಚವಾಗಿರುವುದಿಲ್ಲ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು ಈ ಸಾಲಿನಲ್ಲಿ ಇದುವರೆಗೆ ರೂ. 79,000/–ಗಳನ್ನು ಖರ್ಚು ಮಾಡಿದೆ.

ಮೊರಾರ್ಜಿ ವಸತಿ ಶಾಲೆಗಳನ್ನು ಪ್ರಾರಂಭಿಸುವುದು

1106 (1266) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಮೊರಾರ್ಜಿ ವಸತಿ ಶಾಲೆಗಳ ಸಂಖ್ಯೆ ಎಷ್ಟು ;

ಆ) ಈ ವಸತಿ ಶಾಲೆಗಳನ್ನು ಯಾವ ಯಾವ ಗ್ರಾಮಗಳಲ್ಲಿ ಪ್ರಾರಂಭಿಸಲಾಗಿದೆ ;

ಇ) ಕಲಘಟಗಿ ಮತಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ಬಡ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಈವರೆವಿಗೂ ಈ ಶಾಲೆಗಳನ್ನು ಪ್ರಾರಂಭಿಸದಿರಲು ಕಾರಣವೇನು ;

ಈ) ಹಾಗಿದ್ದಲ್ಲಿ, ಕಲಘಟಗಿ ಮತಕ್ಷೇತ್ರದಲ್ಲಿ ಮೊರಾರ್ಜಿ ವಸತಿ ಶಾಲೆಯನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗುವುದೇ ?